ಕ್ರಿಮಿನಲ್ ಪ್ರಕರಣ ಸಂಖ್ಯೆ : **3414 / 2021**
**ಚಾಸಾ :- 01 / ಪ್ರಾಸಾ :- 01**

**ದಿನಾಂಕಃ 27-03-2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- ಶ್ರೀಮತಿ. ಆರ್. ಟಿ ವಕೀಲರಿಂದ ಆರೋಪಿಗಳ ಪರವಾಗಿ :-**

ನಾನು 5 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಅಲ್ಪಸ್ವಲ್ಪ ಬರುತ್ತದೆ. ಚಾಸಾ-3 ಮತ್ತು ನಾನು ಒಂದೇ ಊರಿನವರು ಹಾಗೂ ಸ್ನೇಹಿತರು ಎಂದರೆ ಸರಿ. ಚಾಸಾ-2 ರವರು ನಿಮ್ಮ ತಂಗಿಯ ಗಂಡ ಎಂದರೆ ಸರಿ. ಆದರೆ ನಮಗೂ ಅವರಿಗೂ ಯಾವುದೇ ಸಂಪರ್ಕ ಇರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಮತ್ತು ಅವರು ಒಟ್ಟಿಗೆ ನ್ಯಾಯಾಲಯದಲ್ಲಿ ಇರುತ್ತೀರಿ ಎಂದರೆ ಸರಿ. ಅಪಘಾತ ಆದ ಸಮಯದಲ್ಲಿ ನಾನು, ನನ್ನ ಹೆಂಡತಿ ಹಾಗೂ ನನ್ನ ಮಗು ಸಹ ಇತ್ತು ಎಂದು ನುಡಿಯುತ್ತಾರೆ. ನಿಪಿ-1 ದೂರನ್ನು ಎಲ್ಲಿ ಬೆರಳಚ್ಚು ಮಾಡಿಸಿರುತ್ತೀರಿ ಎಂದರೆ ನನ್ನ ಮಗುವಿಗೆ ಅಪಘಾತವಾದ್ದರಿಂದ ನಾನು ಅಘಾತದಲ್ಲಿ ಇದ್ದು, ಎಲ್ಲಿ ಬೆರಳಚ್ಚು ಮಾಡಿಸಿರುತ್ತೇವೆ ಎಂದು ಮರೆತು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-1 ದೂರನ್ನು ನಾನೇ ನೀಡಿರುತ್ತೇನೆ ಆದರೆ ಯಾರು ಬೆರಳಚ್ಚು ಮಾಡಿರತ್ತಾರೆ ಎಂದು ನೆನಪಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ಏನೇನು ಬರೆದಿದೆ ಎಂದು ಗೊತ್ತಿದೆಯಾ ಎಂದರೆ ನಾನು ಓದಿಲ್ಲ ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ದೂರನು ಯಾವಾಗ ನೀಡಿರುತ್ತೀರಿ ಎಂದರೆ ಅಪಘಾತ ದಿ.26-01-2020 ರಲ್ಲಿ ಆಗಿರುತ್ತೇವೇ. ನಾನು ದೂರನ್ನು ದಿ.27-01-2020 ರಂದು ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ನಿಪಿ-1 ದೂರನ್ನು ನೀಡಲು ಯಾರ ಜೊತೆಯಲ್ಲಿ ಹೋಗಿರುತ್ತೀರಿ ಎಂದರೆ ನನ್ನ ಸ್ನೇಹಿತನ ಜೊತೆ ಹೋಗಿರುತ್ತೇನೆ ಹೆಸರು ನೆನಪಿಲ್ಲ ಎಂದು ನುಡಿಯುತ್ತಾರೆ. ದಿ.26-01-2020 ರಲ್ಲಿ ಅಪಘಾತ ಎಷ್ಟು ಗಂಟೆಗೆ ಆಗಿರುತ್ತದೆ ಎಂದರೆ ಬೆಳಗ್ಗೆ 10.55 ರಿಂದ 11 ಗಂಟೆ ಒಳಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-1 ದೂರಿನಲ್ಲಿ

ನಿಮ್ಮ ಹೆಂಡತಿ ಮತ್ತು ಮಗು ಮಾತ್ರ ಇತ್ತು ಎಂದು ಇದೆ ಆದರೆ ನೀವು ಅಪಘಾತ ಸ್ಥಳದಲ್ಲಿ ಇದ್ದರಿ ಎಂದು ಇಲ್ಲ ಎಂದರೆ ನಾನು ಸಹ ಇದ್ದೆ ಆದರೆ ಬೆರಳಚ್ಚು ಮಾಡುವಾಗ ತಪ್ಪಾಗಿರಬಹುದು ಎಂದು ನುಡಿಯುತ್ತಾರೆ. ನಾನು ಇದ್ದೆ ಎಂದು ಠಾಣೆಯಲ್ಲಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-1 ದೂರನ್ನು ಠಾಣೆಯಲ್ಲಿಯೇ ಬೆರಳಚ್ಚು ಮಾಡಿರುತ್ತಾರೆ ಎಂದರೆ ನಾನು ದೂರನ್ನು ನೀಡಿರುತ್ತೇನೆ ಯಾರು ಬೆರಳಚ್ಚು ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೀವು ಠಾಣೆಯಲ್ಲಿ ಎಷ್ಟು ಕಡೆ ಸಹಿ ಮಾಡಿರುತ್ತೀರಿ ಎಂದರೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ದೂರು ನೀಡುವ ದಿನ ಬಿಟ್ಟು ಬೇರೆ ದಿನ ಠಾಣೆಗೆ ಹೋಗಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಅಪಘಾತ ಆದಾಗ ನಿಮಗೂ ಪೆಟ್ಟುಗಳು ಆಗಿರುತ್ತದಾ ಎಂದರೆ ಇಲ್ಲ ನನ್ನ ಹೆಂಡತಿಗೆ ಸಣ್ಣ ಪುಟ್ಟ ಗಾಯಗಳು ಆಗಿದ್ದು ನನ್ನ ಮಗನಿಗೆ ಪೆಟ್ಟಾಗಿರುತ್ತದೆ. ನನಗೆ ಯಾವುದೇ ಪೆಟ್ಟಾಗಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಎಷ್ಟು ದೂರದಲ್ಲಿ ಇರುತ್ತೀರಿ ಎಂದರೆ ಅಲ್ಲೆ ಪಕ್ಕದಲ್ಲಿ ಇದ್ದೆ ಎಂದು ನುಡಿಯುತ್ತಾರೆ. ನನ್ನ ಹೆಂಡತಿ ಮಗು ಪಕ್ಕದಲ್ಲಿ ನಿಂತಿದ್ದರು ನಾನು ಅವರಿಂದ ಸುಮಾರು 5 ಅಡಿ ಅಂತರದಲ್ಲಿ ನಿಂತಿದ್ದೆ ಎಂದು ನುಡಿಯುತ್ತಾರೆ. ನಿಮ್ಮ ಹೆಂಡತಿಯವರಿಗೆ ಪೆಟ್ಟಾಗಿದ್ದು ಅವರಿಗೆ ಚಿಕಿತ್ಸೆ ಕೊಡಿಸಿರುತ್ತೀರಾ ಎಂದರೆ ಅವರು ಕೆ. ಸಿ ಜನರಲ್ ಆಸ್ಪತ್ರೆಯಲ್ಲೆ ಕೆಲಸ ಮಾಡುತ್ತಿದ್ದು ಅಲ್ಲಿಯೇ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಅಪಘಾತ ಆದಾಗ ಮಾದಲು ಎಲ್ಲಿ ಚಿಕಿತ್ಸೆ ಕೊಡಿಸಿರುತ್ತೀರಿ ಎಂದರೆ ಸ್ನೇಹಾಲಯ ಸೋಲೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತೀವಿ ಎಂದು ನುಡಿಯುತ್ತಾರೆ. ನಂತರ ನೆಲಮಂಗಲ ಮಾತೃಶ್ರೀ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಅಲ್ಲಿಂದ ನಂತರ ಕಣ್ವ ಆಸ್ಪತ್ರೆಗೆ ನಂತರ ಅಲ್ಲಿಂದ ಕೆ. ಸಿ ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತೇವೆ ಎಂದು ನುಡಿಯುತ್ತಾರೆ. ಅಪಘಾತವಾದ ಮಾರನೇ ದಿನ ಕಣ್ವ ಆಸ್ಪತ್ರೆಯಿಂದ ಬಿಡುಗಡೆ ಮಾಡಿಕೊಂಡು ಕೆ. ಸಿ ಜನರಲ್ ಆಸ್ಪತ್ರೆಗೆ ದಾಖಲು ಮಾಡಿಕೊಂಡಿರುತ್ತೇವೆ. ಅಪಘಾತದ ಮಾರನೇ ದಿನ ಕೆ.

ಸಿ ಜನರಲ್ ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ. ದಿ.27-01-2020?ರ ಸಂಜೆ ವರೆಗೂ ಕಣ್ವ ಆಸ್ಪತ್ರೆಯಲ್ಲಿ ಮೃತ ಪುನೀತ್ ಇದ್ದರು. ಕಣ್ವ ಆಸ್ಪತ್ರೆಯಲ್ಲಿ ಮೃತ ಪುನೀತ್ ಇದ್ದಾಗಲೇ ಬಂದು ನಾನು ದೂರನ್ನು ದಾಖಲು ಮಾಡಿರುತ್ತೇನೆ. ಆನಂತರ ನಾನು ಠಾಣೆಗೆ ಬಂದಿರುವುದಿಲ್ಲ. ನಾವು ಬಸ್ ನಿಲ್ದಾಣದಲ್ಲಿ ಇದ್ದಾಗ ಕುದೂರು ಕಡೆಯಿಂದ ಸೋಲೂರು ಕಡೆಗೆ ಹೋಗುವ ಬಸ್ಸು ಬಂದು ನಿಂತಿತ್ತು ಎಂದು ನುಡಿಯುತ್ತಾರೆ.

ಅಪಘಾತಪಡಿಸಿದ ಟಾಟ ಎ.ಸಿ ಯಾವ ಕಡೆಯಿಂದ ಬರುತ್ತಿತ್ತು ಎಂದರೆ ಸೋಲೂರು ಕಡೆಯಿಂದ ಕುದೂರು ಕಡೆಗೆ ಹೋಗುತ್ತಿತ್ತು ಎಂದು ನುಡಿಯುತ್ತಾರೆ. ನಾವು ಕುದೂರು ಕಡೆಗೆ ಹೋಗುವ ರಸ್ತೆಯಲ್ಲಿ ನಿಂತಿದ್ದೇವು. ಅಪಘಾತ ಬಸ್ ನಿಲ್ದಾಣದಲ್ಲಿ ಆಗಿರುತ್ತದೆ. ಬಸ್ಸು ಬಸ್ ನಿಲ್ದಾಣದಲ್ಲಿ ನಿಲ್ಲುತ್ತದೆ ಬೇರೆ ಎಲ್ಲಿಯೂ ನಿಲ್ಲಿಸುವುದಿಲ್ಲ ಎಂದು ನುಡಿಯುತ್ತಾರೆ. ಸ್ಕೂಲ್ ಕಾಂಪೌಂಡ್ ಪಕ್ಕದಲ್ಲಿ ಬಸ್ ನಿಲ್ದಾಣ ಇರುತ್ತದೆ. ದೂರು ನೀಡಿದ ನಂತರ ನಾನು ಮಹಜರ್ ಕಾಲಕ್ಕೆ ಅಪಘಾತ ಸ್ಥಳಕ್ಕೆ ಬಂದಿರುತ್ತೇನೆ. ಮಹಜರ್ಗೆ ಹಾಜರಾಗಲು ಪೋಲೀಸರು ಮೌಖಿಕವಾಗಿ ತಿಳಿಸಿರುತ್ತಾರೆ. ನಿಮಗೆ ಮಹಜರ್ ಯಾವಾಗ ಆಯಿತು ಎಂದು ನೆನಪಿಲ್ಲ ಎಂದರೆ ದಿ.28-01-2020 ರಂದು ಬೆಳಗ್ಗೆ 9 ರಿಂದ 9.30 ವರೆಗೆ ಮಹಜರ್ ಗೆ ಹಾಜರಾಗಿರುತ್ತೇನೆ. ಮಹಜರ್ ಗೆ ಹಾಜರಾಗಿ ಸಹಿ ಮಾಡಿರುತ್ತೇನೆ. ಮಹಜರ್ ಗೆ ಎಲ್ಲಿ ಸಹಿ ಮಾಡಿರುತ್ತೀರಿ ಎಂದರೆ ನಾನು ಅಪಘಾತ ಆದ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಮಹಜರ್ ಸ್ಥಳದಲ್ಲಿ ನಾನು, ಪೋಲೀಸರು , ಚಾಸಾ-2 ಮತ್ತು 3 ರವರು ಹಾಜರಿದ್ದೇವು ಎಂದು ನುಡಿಯುತ್ತಾರೆ. ಮಹಜರ್ ವೇಳೆಯಲ್ಲಿ ಬೇರೆ ಜನರು ಇದ್ದರಾ ಎಂದರೆ ಇದ್ದರು ಎಂದು ನುಡಿಯುತ್ತಾರೆ. ಮಹಜರ್ ವೇಳೆಯಲ್ಲಿ ಪೋಲೀಸರು ಏನು ಮಾಡಿರುತ್ತಾರೆ ಎಂದರೆ ನನ್ನನ್ನು ಅಪಘಾತವಾದ ಸ್ಥಳದ ಬಗ್ಗೆ ವಿಚಾರಿಸಿ ನಾನು ಅಪಘಾತ ಸ್ಥಳವನ್ನು ತೋರಿಸಿರುತ್ತೇನೆ ಹಾಗೂ ಅವರು ಕಾನೂನು ರೀತಿಯಲ್ಲಿ ಮಹಜರ್ ಕ್ರಮ ಅನುಸರಿಸಿ ನಮ್ಮಗಳ ಸಹಿ ಪಡೆದುಕೊಂಡಿರುತ್ತಾರೆ

ಎಂದು ನುಡಿಯುತ್ತಾರೆ. ಅಪಘಾತ ಸ್ಥಳದಲ್ಲಿ ಎಷ್ಟು ಸಹಿ ಮಾಡಿರುತ್ತೀರಿ ಎಂದರೆ ಒಂದು ಕಡೆ ಅಥವಾ ಎರಡು ಕಡೆ ಮಾಡಿಸಿಕೊಂಡಿರಬಹುದು ನೆನಪಿಲ್ಲ ಎಂದು ನುಡಿಯುತ್ತಾರೆ. ಮಹಜರ್ ವೇಳೆಯಲ್ಲಿ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ, ಅಪಘಾತ ಸ್ಥಳದಲ್ಲಿ ಚಿತ್ರವನ್ನು ಬಿಡಿಸಿರುತ್ತಾರಾ ಎಂದರೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

ಅಪಘಾತ ಸ್ಥಳದ ಚೆಕ್ಕುಬಂಧಿ ಪೂರ್ವಕ್ಕೆ ಸೋಲೂರು ಕಡೆಗೆ ಹೋಗುವ ರಸ್ತೆ, ಪಶ್ಚಿಮಕ್ಕೆ ಕುದೂರು ರಸ್ತೆ, ಉತ್ತರಕ್ಕೆ ಒಂಬತ್ತು ಗುಂಟೆ ಗ್ರಾಮ, ದಕ್ಷಿಣಕ್ಕೆ ಸರ್ಕಾರಿ ಶಾಲೆ ಎಂದು ನುಡಿಯುತ್ತಾರೆ. ಅಪಘಾತ ಸ್ಥಳದಲ್ಲಿ ಬೆರಳಚ್ಚು ಮಾಡಿಕೊಂಡಿರುತ್ತಾರೆ ಅಥವಾ ಬರೆದುಕೊಂಡಿರುತ್ತಾರಾ ಎಂದರೆ ಬರೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-2 ಕ್ಕೆ ಘಟನಾ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನಾನು ಓದಿರುವುದಿಲ್ಲ. ಪೋಲೀಸರು ಓದಿ ಹೇಳಿರುತ್ತಾರಾ ಎಂದರೆ ನಾನು ಆ ದಿವಸ ಅದನ್ನು ಕೇಳುವ ಪರಿಸ್ಥಿತಿಯಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಘಟನಾ ಸ್ಥಳದಲ್ಲಿ ಚಾಸ-2 ಮತ್ತು 3 ರವರು ಇದ್ದರು ಎಂದು ನುಡಿದಿದ್ದು, ಅವರವುಗಳ ಸಹಿಯನ್ನು ಪಡೆದುಕೊಂಡಿರುತ್ತಾರಾ ಎಂದರೆ ಹೌದು ಎಂದು ನುಡಿಯುತ್ತಾರೆ. ನೀವು ಘಟನಾ ಸ್ಥಳದಲ್ಲಿ ಮಹಜರ್ ಮುಗಿಸಿ ಆಸ್ಪತ್ರೆಗೆ ಹೋಗಿರುತ್ತೀರಾ ಎಂದರೆ ಇಲ್ಲ ಸೋಲೂರು ಹೊರ ಠಾಣಾ ಆವರಣದಲ್ಲಿ ಅಮಾನತ್ತು ಮಹಜರ್ ನ್ನು ಬೆಳಗ್ಗೆ 10 ರಿಂದ 10.30 ರವರೆಗೆ ಜರುಗಿಸಿರುತ್ತಾರೆ ಎಂದು ನುಡಿಯುತ್ತಾರೆ. ಆಗ ನಾನು ಅಲ್ಲಿಯೇ ಇದ್ದೇನೆ ಎಂದು ನುಡಿಯುತ್ತಾರೆ. ಅಮಾನತ್ತು ಮಹಜರ್ ಕಾಲದಲ್ಲಿ ಚಾಸಾ-2 ಮತ್ತು 3 ರವರು ಸಹ ಇದ್ದು ಸಹಿಯನ್ನು ಮಾಡಿರುತ್ತಾರೆ. ಅಲ್ಲಿ ಏನಾದರೂ ಬರೆದುಕೊಂಡರಾ ಎಂದರೆ ಬರೆದುಕೊಂಡಿರಬಹುದು ನನಗೆ ನನೆನಪಿಲ್ಲ ಎಂದು ನುಡಿಯುತ್ತಾರೆ. ಸೋಲೂರು ಹೊರ ಠಾಣಾ ಆವರಣದಲ್ಲಿ ಪೋಲೀಸರು ಏನು ಮಾಡಿರುತ್ತಾರೆ ಎಂದರೆ ಅಪಘಾತ ಪಡಿಸಿದ ವಾಹನದ ಪರಿಶೀಲನೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಅಪಘಾತ ಸ್ಥಳ ಹಾಗೂ ಸೋಲೂರು ಪೊ. ಠಾಣಾ ಆವರಣದಲ್ಲಿ ಪೋಲೀಸರು ಫೋಟೋಗಳನ್ನು ತೆಗೆದಿರುತ್ತಾರಾ ಎಂದರೆ ತೆಗೆದಿರಬಹುದು ಇಲ್ಲದೇ ಇರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಪಘಾತ ಸ್ಥಳದಲ್ಲಿ ಪೋಲೀಸರು ಸ್ಕೆಚ್ ನ್ನು ತಯಾರಿಸಿರುತ್ತಾರಾ ಎಂರದೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪೋಲೀಸರು ಮಹಜರ್ ಗೆ ಸಹಿ ಮಾಡಲು ಹೇಳಿರುತ್ತಾರೆ ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸೋಲೂರು ಹೊರ ಠಾಣಾ ಆವರಣದಲ್ಲಿ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಘಟನೆ ಸಂಬಂಧ ಪೋಲೀಸರಿಗೆ ಹೇಳಿಕೆ ನೀಡಿರುತ್ತೀರಾ ಎಂದರೆ ಇಲ್ಲ ದೂರನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಅಪಘಾತ ಸ್ಥಳದಲ್ಲಿ ಅಂಗಡಿ ಇದ್ದು ಅಲ್ಲಿಂದು ಮೃತ ಪುನೀತ್ ಓಡಿ ಬಂದಿರುತ್ತಾರೆ ಎಂದರೆ ಸರಿಯಲ್ಲ. ಮಹಜರ್ ಜರುಗಿಸಲು ನೀವೇ ಮಾಹಿತಿ ನೀಡಿರುತ್ತೀರಿ ಎಂದರೆ ಹೌದು ನಾನೇ ಪೋಲೀಸರಿಗೆ ಇದೆ ಜಾಗದಲ್ಲಿ ಅಪಘಾತ ಆಗಿರುತ್ತದೆ ಎಂದು ತೋರಿಸಿರುತ್ತೇನೆ ಎಂದು ನುಡಿಯುತ್ತಾರೆ. ಕಚ್ಚಾ ನಕ್ಷೆಗೂ ಸಹ ನಾನೇ ಮಾಹಿತಿ ನೀಡಿರುತ್ತೇನೆ. ಶಾಲೆಯ ಪಕ್ಕದಲ್ಲಿ ಇರುವ ಬಸ್ ನಿಲ್ದಾಣದಲ್ಲಿ ನಾವು ಕುದೂರಿಗೆ ಹೋಗಲು ನಿಂತಿರುತ್ತೇವೆ. ಟಾಟ ಎ. ಸಿ ಸಹ ಸೋಲೂರು ಕಡೆಯಿಂದ ಕುದೂರು ಕಡೆಗೆ ಹೋಗಲು ಬಂದಿರುತ್ತದೆ. ಕಚ್ಚಾ ನಕ್ಷೆ ತಯಾರಿಸಲು ನಾನೇ ಪೋಲೀಸರಿಗೆ ಮಾಹಿತಿ ನೀಡಿರುತ್ತೇನೆ ಆದರೆ ಪೋಲೀಸರು ಏನು ಬರೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಅಪಘಾತ ಆರೋಪಿಯ ತಪ್ಪಿನಿಂದ ಆಗಿರುವುದಿಲ್ಲ ಮೃತ ಪುನೀತ್ ರವರು ಓಡಿ ಬಂದು ಸದರಿ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ನಿಮ್ಮ ಹೆಂಡತಿ ಅಪಘಾತ ಸ್ಥಳದಲ್ಲಿ ಇರಲಿಲ್ಲ ಆಗಾಗಿ ಅವರಿಗೆ ಯಾವುದೇ ಏಟುಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ನೀವೆಲ್ಲಾ ರಸ್ತೆಯ ಹೊರಗಡೆ ಇರುತ್ತೀರಿ ಮೃತ ಪುನೀತ್ ಮಾತ್ರ ರಸ್ತೆಗೆ ಓಡಿ ಬಂದಿರುತ್ತಾರೆ ಆಗಾಗಿ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತ ಆಗದೇ ಇದ್ದರೂ ಸಹ ನೀವು ಪರಿಹಾರ ಹಣವನ್ನು ಪಡೆದುಕೊಳ್ಳಲುವ ಉದ್ದೇಶದಿಂದ

ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಮಹಜರ್ ಗೆ ಕ್ರಮ ಅನುಸರಿಸಿಲ್ಲ, ಮಹಜರ್ ಗೆ ಸಹಿ ಮಾಡಿಲ್ಲ, ಠಾಣೆಯಲ್ಲಿಯೇ ಖಾಲಿ ಹಾಳೆಗೆ ಸಹಿ ಮಾಡಿಸಿಕೊಂಡಿರುತ್ತಾರೆ ಎಂದರೆ ಮಹಜರ್ ಅನುಸರಿಸಿ ಅಲ್ಲಿಯೇ ಸಹಿ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**

**ದಿನಾಂಕಃ 27-03-2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- ಶ್ರೀಮತಿ. ಆರ್. ಟಿ ವಕೀಲರಿಂದ ಆರೋಪಿಗಳ ಪರವಾಗಿ :-**

ಚಾಸಾ-1 ನನ್ನ ಸಂಬಂಧಿಕರಲ್ಲ. ನೀವು ಜನತಾ ಕಾಲೋನಿ ಸೋಲೂರಿನಲ್ಲಿ ವಾಸವಿರುತ್ತೇನೆ ಎಂದರೆ ಸರಿ. ಒಂಬತ್ತು ಕುಂಟೆಗೂ ಹಾಗೂ ಜನತಾ ಕಾಲೋನಿಗೂ ಸುಮಾರು ಎರಡು ಕಿ. ಮೀ. ಅಂತರವಿದೆ. ಅಪಘಾತವನ್ನು ನಾನು ನೋಡಿರುತ್ತೇನೆ. ಮಹಜರ್ ಗೆ ಒಂದು ಸಹಿಯನ್ನು ಘಟನಾ ಸ್ಥಳದಲ್ಲಿ ಪಡೆದುಕೊಂಡಿರುತ್ತಾರೆ ಮತ್ತೊಂದು ಸಹಿಯನ್ನು ಸೋಲೂರು ಹೊರ ಠಾಣಾ ಆವರಣದಲ್ಲಿ ಪಡೆದುಕೊಂಡಿರುತ್ತಾರೆ. ದಿ.28-01-2020 ರಂದು ಮಹಜರ್ ಗೆ ಸಹಿ ಪಡೆದುಕೊಂಡಿರುತ್ತಾರೆ. ಮಹಜರ್ಗೆ ಹಾಜರಾಗಲು ಪೋಲೀಸರು ನೋಟಿಸ್ ನೀಡಿರುವುದಿಲ್ಲ, ಪೋಲೀಸರು ಕರೆ ಮಾಡಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಘಟನಾ ಸ್ಥಳದಲ್ಲಿ ಮಹಜರ್ ನ್ನು ಎಷ್ಟು ಗಂಟೆಗೆ ಮಾಡಿರುತ್ತಾರೆ ಎಂದರೆ ಬೆಳಗ್ಗೆ 9 ಗಂಟೆಯಿಂದ ಅರ್ಧ ಗಂಟೆ ಸಮಯ ಮಹಜರ್ ಕ್ರಮ ಅನುಸರಿಸಿರುತ್ತಾರೆ ಎಂದು ನುಡಿಯುತ್ತಾರೆ. ಮಹಜರ್ ಸ್ಥಳದಲ್ಲಿ ಫೋಟೋವನ್ನು ತೆಗೆದಿರುತ್ತಾರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಘಟನಾ ಸ್ಥಳದಲ್ಲಿ ಏನಾದರೂ ಅಮಾನತ್ತು ಮಾಡಿಕೊಂಡಿರುತ್ತಾರಾ ಎಂದರೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಆಟೋ ಚಾಲಕನಾಗಿದ್ದರಿಂದ ನನಗೆ ಘಟನಾ ಸ್ಥಳ ಚನ್ನಾಗಿ ಗೊತ್ತಿರುತ್ತದೆ. ಬಸ್ ನ್ನು ಸಾಮಾನ್ಯವಾಗಿ ಪೆಟ್ಟಿ ಅಂಗಡಿಯ ಬಳಿ ನಿಲ್ಲಿಸುತ್ತಾರೆ ಎಂದರೆ ಒಬ್ಬೊಬ್ಬರು ಒಂದೊಂದು ಕಡೆ ನಿಲ್ಲಿಸುತ್ತಾರೆ ಎಂದು ನುಡಿಯುತ್ತಾರೆ. ಅಂಗಡಿಯ ಕಡೆಯಿಂದ ಒಂಬತ್ತನ ಕುಂಟೆಗೆ ಹೋಗುವ ರಸ್ತೆ ಇರುತ್ತದೆ ಅಲ್ಲಿಯೇ ನಿಲ್ಲಿಸುತ್ತಾರೆ ಎಂದು ನುಡಿಯುತ್ತಾರೆ. ಪೋಲೀಸರು ಮಹಜರ್ ವೇಳೆಯಲ್ಲಿ ಏನು ಮಾಡಿರುತ್ತಾರೆ ಎಂದರೆ ಮೃತ ಪುನೀತ್ ರವರು ಎಲ್ಲಿ ಬಿದ್ದಿದ್ದರು ಹಾಗೂ ಟಾಟ ಎ. ಸಿ ಎಲ್ಲಿ ನಿಂತಿತ್ತು ಎಲ್ಲಾ ಪರಿಶೀಲನೆ ಮಾಡಿ ಬರೆದುಕೊಂಡಿರುತ್ತಾರೆ ನಂತರ ಸಹಿ ಮಾಡಲು

ಕೋರಿರುತ್ತಾರೆ ನಂತರ ಸಹಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ಏನು ಬರೆದುಕೊಂಡಿರುತ್ತಾರೆ ಎಂದರೆ ನಮ್ಮನ್ನು ಹೆಸರು, ಫೋನ್ ನಂಬರ್ ವಿಳಾಸ ಕೇಳಿರುತ್ತಾರೆ ನಾನು ಹೇಳಿರುತ್ತೇನೆ ಅವರು ಏನು ಬರೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-2 ರಲ್ಲಿ ಏನು ಬರೆದುಕೊಂಡಿದ್ದಾರೆ ಎಂದು ಪೋಲೀಸರು ಹೇಳಿರುತ್ತಾರಾ ಎಂದರೆ ಮೃತ ವ್ಯಕ್ತಿಯ ಹೆಸರು ತಂದೆಯ ಹೆಸರು ಅಪಘಾತ ಹೇಗೆ ಆಗಿರುತ್ತದೆ ಎಂದು ಮುಖ್ಯವಾಗಿ ಏನು ಅಂಶಗಳು ಬೇಕು ಅದನ್ನು ಮಾತ್ತು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಅದರಲ್ಲಿ ಏನು ಬರೆದಿದ್ದಾರೆ ಎಂದು ನೀವು ಓದಿ ತಿಳಿದುಕೊಂಡಿಲ್ಲ ಎಂದರೆ ನಾನು ಓದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಜೊತೆ ಯಾರು ಸಹಿ ಮಾಡಿರುತ್ತಾರೆ ಎಂದರೇ ನಾನು ಮತ್ತು ಚಾಸಾ-3 ರವರು ಸಹಿ ಮಾಡಿರುತ್ತೇವೆ ಬೇರೆ ಯಾರು ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಘಟನಾ ಸಥಳದಲ್ಲಿ ನಾನು, ಪೋಲೀಸರು, ಚಾಸಾ-3 ಹಾಗೂ ಸಾರ್ವಜನಿಕರು ಹಾಜರಿದ್ದೇವು ಎಂದು ನುಡಿಯುತ್ತಾರೆ. ಚಾಸಾ-3 ರವರು ಸಹಿ ಮಾಡಿರುತ್ತಾರೆ ಎಂದು ನೀವು ನುಡಿದಿದ್ದು ಅವರು ನಿಮಗೆ ಗೊತ್ತಾ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರು ಯಾವ ಊರಿನವರು ಎಂದರೆ ಅವರು ಒಂಬತ್ತನ ಕುಂಟೆಯವರು ಅಪಘಾತ ಸ್ಥಳದಲ್ಲಿ ಮಹಜರ್ ವೇಳೆಯಲ್ಲಿ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ಘಟನಾ ಸ್ಥಳದಲ್ಲಿ ಮಹಜರ್ ಕ್ರಮ ಅನುಸರಿಸಿ ನಂತರ ಸೋಲೂರು ಪೋ. ಠಾಣಾ ಆವರಣಕ್ಕೆ ಸುಮಾರು 10 ರಿಂದ 10.30 ರ ಸಮಯಕ್ಕೆ ಹೋಗಿರುತ್ತೇವೆ. ಸೋಲೂರು ಪೋ. ಠಾಣಾ ಆವರಣದಲ್ಲಿ ಅಪಘಾತ ಪಡಿಸಿದ ವಾಹನವನ್ನು ಪರಿಶೀಲನೆ ಮಾಡಿರುತ್ತಾರೆ ಅಮಾನತ್ತು ಮಹಜರ್ ವೇಳೆಯಲ್ಲಿ ನಾನು ಮತ್ತು ಪೋಲೀಸರು ಚಾಸಾ-1 ಮತ್ತು ಚಾಸಾ-3 ರವರು ಹಾಜರಿದ್ದೇವು. ಸದರಿ ಸಮಯದಲ್ಲಿ ಪೋಲೀಸರು ಅಪಘಾತ ಪಡಿಸಿದ ವಾಹನ ಫೋಟೋಗಳನ್ನು ಮೊಬೈಲ್ ನಿಂದ ತೆಗೆದಿರುತ್ತಾರೆ. ಸದರಿ ಸಮಯದಲ್ಲಿ ಏನು ಬರೆದುಕೊಂಡಿರುತ್ತಾರೆ ಎಂದರೆ ಅಪಘಾ ಪಡಿಸಿದ ವಾಹನ ಜಖಂ ಗೊಂಡಿರುವ ಎಂದು ಬಗ್ಗೆ ನುಡಿಯುತ್ತಾರೆ. ಅಮಾನತ್ತು ಮಹಜರ್ ವೇಳೆಯಲ್ಲಿ ಒಂದೇ ಕಡೆ ಸಹಿ ಮಾಡಿರುತ್ತೇನೆ. ಅಪಘಾತ ವಾದ ಬಗ್ಗೆ ಪೋಲೀಸರು ಸೋಲೂರು

ಪೋ. ಠಾಣಾ ಆವರಣದಲ್ಲಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಅಲ್ಲಿ ಬೆರಳುಚ್ಚ ಮಾಡಿರುತ್ತಾರಾ ಅಥವಾ ಕೈಯಲ್ಲಿ ಬರೆದುಕೊಂಡಿರುತ್ತಾರಾ ಎಂದರೆ ಕೈಯಲ್ಲಿ ಬರೆದುಕೊಂಡಿರುತ್ತಾರೆ ನಂತರ ಅವರು ಠಾಣೆಯಲ್ಲಿ ಬೆರಳಚ್ಚು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಘಟನಾ ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿಲ್ಲ ಹಾಗೂ ಸೋಲೂರು ಹೊರ ಠಾಣಾ ಆವರಣದಲ್ಲಿ ಯಾವುದೇ ಮಹಜರ್ ಜರುಗಿಸಿಲ್ಲ, ಮೃತ ಪುನೀತ್ ರವರು ನಿಮ್ಮ ಸಂಬಂಧಿಕರಾಗಿದ್ದರಿಂದ ಮಹಜರ್ ನ್ನು ಠಾಣೆಯಲ್ಲೆ ತಯಾರಿಸಿರುತ್ತಾರೆ ಅದಕ್ಕೆ ನೀವು ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಮಹಜರ್ ನ್ನು ಠಾಣೆಯಲ್ಲಿ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**

ಕ್ರಿಮಿನಲ್ ಪ್ರಕರಣ ಸಂಖ್ಯೆ : **3414 / 2021**
**ಚಾಸಾ :- 03 / ಪ್ರಾಸಾ :- 03**

**ದಿನಾಂಕಃ 27-03-2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- ಶ್ರೀಮತಿ. ಆರ್. ಟಿ ವಕೀಲರಿಂದ ಆರೋಪಿಗಳ ಪರವಾಗಿ :-**

ನಾನು ವಿದ್ಯಾಭ್ಯಾಸ ಮಾಡಿಲ್ಲ ನನಗೆ ಓದಲು ಬರೆಯಲು ಬರುವುದಿಲ್ಲ. ಚಾಸಾ-1 ಮತ್ತು 2 ನಿಮಗೆ ಗೊತ್ತು ಎಂದರೆ ಸರಿ. ನೀವು ಮತ್ತು ಚಾಸಾ-1 ಮತ್ತು 2 ರವರು ಸ್ನೇಹಿತರು ಎಂದರೆ ಸರಿ. ಚಾಸಾ-1 ರವರ ಮಗುವಿಗೆ ಅಪಘಾತವಾದ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ನಾನು ಅಲ್ಲಿ ಟೀ ಅಂಗಡಿಯ ಬಳಿ ಕುಳಿತ್ತಿದ್ದೆ ಎಂದು ನುಡಿಯುತ್ತಾರೆ. ಅಪಘಾತ ಪೆಟ್ಟಿ ಅಂಗಡಿಯ ಆಲದ ಮರದ ಕೆಳೆಗೆ ಆಗಿರುತ್ತದೆ ಎಂದರೆ ಸರಿ . ಅಲ್ಲಿ ಪಕ್ಕದಲ್ಲಿ ಒಂಬತ್ತನ ಕುಂಟೆಗೆ ಹೋಗುವ ರಸ್ತೆ ಇರುತ್ತದೆ ಎಂದರೆ ಸರಿ. ಬಸ್ಸನ್ನು ಪೆಟ್ಟಿ ಅಂಗಡಿಯ ಬಳಿಯೇ ನಿಲ್ಲಿಸುತ್ತಾರೆ ಎಂದರೆ ಸರಿ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಸದರಿ ಫೋಟದಲ್ಲಿ ಇರುವ ಪೆಟ್ಟಿ ಅಂಗಡಿಯ ಬಳಿಯೇ ಬಸ್ಸನ್ನು ನಿಲ್ಲಿಸುತ್ತಾರೆ ಎಂದು ಒಪ್ಪಿಕೊಂಡಿದ್ದು, ಸದರಿ ಫೋಟೋವನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಫೋಟೋವನ್ನು ತೋರಿಸಲಾಗಿ ಸದರಿ ಫೋಟೊದಲ್ಲಿ ಶಾಲೆಯ ಕಾಂಪೌಂಡ್ ಇದ್ದು ಅಲ್ಲಿಯೇ ಬಸ್ ನಿಲ್ದಾಣ ಇದೆ ಎಂದು ಒಪ್ಪಿಕೊಂಡಿದ್ದು ಸದರಿ ಘೋಟೋಗಳನ್ನು ನಿಡಿ-2 ಎಂದು ಗುರುತಿಸಲಾಯಿತು. ಅಪಘಾತ ಯಾವಾಗ ಆಗಿರುತ್ತದೆ ಎಂದರೆ ಬೆಳಗ್ಗೆ 9 ರಿಂದ 9.30 ರ ವೇಳೆಯಲ್ಲಿ ಅಪಘಾತವಾಗಿರುತ್ತದೆ ಎಂದು ನುಡಿಯುತ್ತಾರೆ. ಅಪಘಾತ ವೇಳೆಯಲ್ಲಿ ಬಸ್ ನಿಂತಿತ್ತು ಎಂದರೆ ಸರಿ. ಸದರಿ ಬಸ್ಸು ಕುದೂರಿನಿಂದ ಮಾಗಡಿ ಕಡೆಗೆ ಹೋಗುತ್ತದೆ ಎಂದರೆ ಸರಿ. ಟಾಟ ಎ. ಸಿ ಸೋಲೂರಿನಿಂದ ಕುದೂರು ಕಡೆಗೆ ಬರುತ್ತಿತ್ತು ಎಂದರೆ ಸರಿ. ಆ ಸಮಯದಲ್ಲಿ ಮೃತ ಪುನೀತ್ ಎಲ್ಲಿ ನಿಂತಿದ್ದರು ಎಂದರೆ ಬಸ್ ಹಿಂದೆ ನಿಂತಿದ್ದರು ಎಂದು ನುಡಿಯುತ್ತಾರೆ. ಪೋಲೀಸರು ಮಹಜರ್ಗೆ ಹಾಜರಾಗಲು ನಿಮಗೆ ನೋಟಿಸ್ ನೀಡಿದ್ದಾರಾ ಎಂದರೆ ಘಟನಾ ಸ್ಥಳದಲ್ಲಿ ನಾನು ಇರುತ್ತೇನೆ ಎಂದು ನುಡಿಯುತ್ತಾರೆ. ಪೋಲಿಸರು ಸಹಿಯನ್ನು ಆಸ್ಪತ್ರೆಯಲ್ಲಿ

ಪಡೆದುಕೊಂಡಿರುತ್ತಾರೆ. ಆಸ್ಪತ್ರೆಯಲ್ಲಿ ಎಂದು ಸಹಿ ಮಾಡಿರುತ್ತೇನೆ. ಸಹಿಯನ್ನು ಯಾಕೆ ಮಾಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಓದಲು ಬರುವುದಿಲ್ಲ ಸಹಿ ಮಾಡಲು ಕೋರಿರುತ್ತಾರೆ ಸಹಿ ಮಾಡಿರುತ್ತೇನೆ. ಅಲ್ಲಿ ಬಿಟ್ಟು ಬೇರೆ ಎಲ್ಲಿಯೂ ಸಹ ಸಹಿ ಮಾಡಿರುವುದಿಲ್ಲ. ನೀವು ಚಾಸಾ-1 ಮತ್ತು 2 ಸಹ ಸಹಿ ಮಾಡಿರುತ್ತೀರಾ ಅದನ್ನು ಎಲ್ಲಿ ಮಾಡಿರುತ್ತೀರಿ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಆಸ್ಪತ್ರೆಯಲ್ಲಿ ಬಿಟ್ಟು ಬೇರೆ ಎಲ್ಲಿಯೂ ಸಹ ಸಹಿ ಮಾಡಿರುವುದಿಲ್ಲ. ಘಟನಾ ಸಥಳಕ್ಕೆ ಪೋಲೀಸರು ಬಂದು ಏನು ಮಾಡಿದ್ದಾರೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿ , ಹಾಗೂ ಅಲ್ಲಿ ಪೋಲೀಸರು ಬಂದಿರುವ ವಿಚಾರ ಸಹ ನಿಮಗೆ ಗೊತ್ತಿಲ್ಲ ಎಂದರೆ ಸರಿ. ಅದೇ ರೀತಿ ಪೋಲೀಸರು ಸೋಲೂರು ಹೊರ ಠಾಣಾ ಆವರಣದಲ್ಲಿ ಹೋಗಿರುತ್ತಾರೆ ಆ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**